www.impactmeasurement.co.in

Date : 16-Mar-2006 Edition : Bangalore Page No.: 11 Page Name: n.a. Size: 100%

Sector: IT Circulation: 198319 AVE: Rs.19343.03 Frequency: Daily

Publication: Vijaya Karnataka Title: HP India Launches Pen Technology

# Vijaya Karnataka

## ಎಚ್‌ಪಿ ಇಂಡಿಯಾ ಬಾರಿಸಿದ 'ಕನ್ನಡ' ಡಿಂಡಿಮ



ಎಚ್‌ಪಿ ಇಂಡಿಯಾದ ಜಿಕೆಬಿ ತಂತ್ರಜ್ಞಾನವನ್ನು ಕಂಪನಿ ಉಪಾಧ್ಯಕ್ಷ ಡಿಕ್ ಕ್ಯಾಂಪ್‌ಮನ್ ಮತ್ತು ನಿರ್ದೇಶಕ ಅಜಯ್ ಗುಪ್ತಾ ಪ್ರದರ್ಶಿಸಿದರು.

ಬೆಂಗಳೂರು, ಮಾ. 15 - ಹ್ಯೂಲೆಟ್ ಪೆಕಾರ್ಡ್‌ನ ಅಂಗಸಂಸ್ಥೆ ಎಚ್‌ಪಿ ಇಂಡಿಯಾ, ಕನ್ನಡ ಲಿಪಿಯನ್ನು ನೇರವಾಗಿ ಕಂಪ್ಯೂಟರ್‌ನಲ್ಲಿ ದಾಖಲಿಸುವ ಪೆನ್ ಆಧಾರಿತ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸಿದೆ.

ಎಚ್‌ಪಿ ಲ್ಯಾಬ್ಸ್ ಇಂಡಿಯಾದಲ್ಲಿ ಗೆಸ್ಚರ್ ಬೇಸ್ಡ್ ಕೀಬೋರ್ಡ್ (ಜಿಕೆಬಿ) ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲಾಗಿದೆ. ಈ ತಂತ್ರಜ್ಞಾನದಿಂದ ಇಂಗ್ಲಿಷ್ ಅಥವಾ ಟೈಪಿಂಗ್‌ನ ಜ್ಞಾನವಿಲ್ಲದವರು ಕೂಡ ಕಂಪ್ಯೂಟರ್ ಉಪಯೋಗಿಸಬಹುದಾಗಿದೆ ಎಂದು ಎಚ್‌ಪಿ ಸಂಶೋಧನೆ ವಿಭಾಗದ ಹಿರಿಯ ಉಪಾಧ್ಯಕ್ಷ ಡಿಕ್ ಲ್ಯಾಂಪ್‌ಮನ್ ತಿಳಿಸಿದ್ದಾರೆ.

ಕನ್ನಡದಲ್ಲಿ ಬರೆಯಲಾಗುವ ಜಿಕೆಬಿಯನ್ನು ಬಿಡುಗಡೆ ಮಾಡಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಈ ಕೀಬೋರ್ಡ್ (ಜಿಕೆಬಿ)ನಲ್ಲಿ ದೇವನಾಗರಿ ಮತ್ತು ತಮಿಳು ಲಿಪಿಗಳನ್ನೊಳಗೊಂಡ ಭಾಷೆಗಳನ್ನೂ ದಾಖಲಿಸಬಹುದು ಎಂದರು.

ಜಿಕೆಬಿಯನ್ನು ಎಚ್‌ಪಿ ಇನ್‌ವೆಂಟ್‌ನ ಇಲಾಖಾ ನಿರ್ದೇಶಕ ಡಾ. ಶೇಖರ್ ಬೊರ್ಗಾಂವ್‌ಕರ್ ಮತ್ತು ತಂಡ ಜಿಕೆಬಿಯನ್ನು ಅಭಿವೃದ್ಧಿ ಪಡಿಸಿದೆ. ಇದರ ಬೆಲೆ 2000 ರೂ.ಗಳಾಗಿವೆ. ಸದ್ಯಕ್ಕೆ ಇದನ್ನು ಪ್ರತ್ಯೇಕವಾಗಿ ಮಾರಲಾಗುತ್ತಿದೆ ಎಂದು ಎಚ್‌ಪಿ ಲ್ಯಾಬ್ಸ್ ಇಂಡಿಯಾ ನಿರ್ದೇಶಕರಾದ ಅಜಯ್‌ಗುಪ್ತಾ ತಿಳಿಸಿದರು.

ವಿತರಣೆಗೆ - ಬೆಂಗಳೂರು ಮೂಲದ ಇನ್ನೊಂದು ಕಂಪನಿ ಜತೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಈ ತಂತ್ರಜ್ಞಾನದ ಮಾರುಕಟ್ಟೆಗೆ ಕರ್ನಾಟಕ ಸರಕಾರದ ನೆರವನ್ನೂ ಕೇಳಲಾಗುತ್ತಿದೆ. ಇತರ ಭಾಷೆಗಳಲ್ಲೂ ಇಂಥ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಈ ತಿಂಗಳೊಳಗೆ ಅವುಗಳನ್ನು ಏಕಕಾಲದಲ್ಲಿ ಬಿಡುಗಡೆ ಮಾಡಲಾಗುವುದು ಎಂದು ಅವರು ತಿಳಿಸಿದರು.

**ವೈಶಿಷ್ಟ್ಯ ಏನು ?:** ಪ್ರಸಕ್ತ ಚಾಲನೆಯಲ್ಲಿರುವ ಕೀಬೋರ್ಡ್‌ಗಳಲ್ಲಿ ದ್ವಿಭಾಷೆಯ ಕೀಬೋರ್ಡ್ ಅಥವಾ ಡಿಸ್‌ಪ್ಲೇ ಇರುತ್ತದೆ. ಆದರೆ ಎಚ್‌ಪಿ ಜಿಕೆಬಿ ಕಡಿಮೆ ವೆಚ್ಚದ ಪರಿಹಾರವಾಗಿದ್ದು, ಇದರಿಂದ ಇತರ ಭಾಷೆಗಳಲ್ಲಿ ವಿಷಯವನ್ನು ಕಂಪ್ಯೂಟರ್ ಒಳಗೆ ಸೇರಿಸುವುದು ಸುಲಭವಾಗುತ್ತದೆ. ಇದರಲ್ಲಿ ಮುಖ್ಯ ಉಪಕರಣವಾಗಿ ಪೆನ್ ಇರುತ್ತದೆ. ಸಾಮಾನ್ಯವಾಗಿ ಎಲ್ಲರೂ ಲೇಖನಿ ಬಳಸಿಯೇ ಭಾಷೆಗಳನ್ನು ಕಲಿತಿರುವುದರಿಂದ ಇದು ಸುಲಭ ಮತ್ತು ಸರಳ ಪರಿಹಾರವಾಗಿದೆ ಅಜಯ್ ಗುಪ್ತಾ ವಿವರಿಸಿದರು.



© Vijaya Karnataka